<u>ದಿನಾಂಕ **30.01.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**</u>

<u>ಪಾಟಿ ಸವಾಲು ಃ ವಾದಿ ಪರ ವಕೀಲರಿಂದ</u>

ನನ್ನ ತಂದೆಗೆ ನಾವು ಒಟ್ಟು 3 ಜನ ಮಕ್ಕಳು. ನಾವೆಲ್ಲರೂ ಒಟ್ಟಿಗೆ ವಾಸ ಮಾಡುತ್ತಿದ್ದೆವು. ಕುಟುಂಬದ ಯಜಮಾನಿಕೆಯನ್ನು ನನ್ನ ತಂದೆಯೇ ಮಾಡುತ್ತಾರೆ. ನನ್ನ ತಂದೆಯವರು ಅಸಲು ದಾವಾ 674/2012 ರಡಿಯಲ್ಲಿ ಹಿಸ್ಸಾ ದಾವೆಯನ್ನು ಹಾಕಿರುತ್ತಾರೆ ಎಂದರೆ ಸರಿ . ಅದರಲ್ಲಿ ನಾನು 27 ನೇ ಪ್ರತಿವಾದಿ ಎಂದರೆ ಸರಿ . ಅದರಲ್ಲಿ ಕುಟುಂಬದಲ್ಲಿ ಈಗಾಗಲೇ ಹಿಸ್ಸೆ ಆಗಿದೆ ಎಂದು ದಾವೆ ವಜಾ ಆಗಿರುತ್ತದೆ ಎಂದರೆ ಸರಿ . ಕುಟುಂಬದಲ್ಲಿ ಹಿಸ್ಸೆ ಆಗಿಲ್ಲ ಎಂದು ಹೇಳುವುದು ಸರಿಯಲ್ಲ. ನಾನು ದೊಡ್ಡಪ್ಪ ಬೈರೇಗೌಡ ಪಾಲನೆ ಪೋಷಣೆ ಮಾಡುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ಮರಣ ಶಾಸನ ಪತ್ರವನ್ನು ಬರೆದಿಟ್ಟಿರುತ್ತಾರೆ ಎಂದರೆ ಸುಳ್ಳು . ಬೈರೇಗೌಡರ ಸ್ವಯಾರ್ಜಿತ ಸ್ವತ್ತಾಗಿ ಸಂಪೂರ್ಣ ಮಾಲಿಕತ್ವ ಹೊಂದಿದ್ದು ಅವರು ಕ್ರಯಪತ್ರದ ಮೂಲಕ ಗೋವಿಂದೇಗೌಡರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಆ ಆಸ್ತಿಯನ್ನು ಕಬಳಿಸಬೇಕೆಂದು ಸುಳ್ಳು ದಾಖಲಾತಿ ಸೃಷ್ಟಿಸಿ ಅವರಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇರುವುದಿಲ್ಲ**.**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.